# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೆಂಟ್/ಉಪಲೋಕ್/ಬಿಜಿಎಮ್/1470/2021**
**ಪಿಓ/ಎ.ಆರ್.ಇ-2 (ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:19/01/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ **ಶ್ರೀ. ಅಜ್ಜನಗೌಡ, ಬಿನ್. ವಡಕನಗೌಡ ಪಾಟೀಲ್, ಕಂದಾಯ ನಿರೀಕ್ಷಕರು, ಕ್ಯಾಸಲ್ ರಾಕ್ ಹೋಬಳಿ, ರಾಮನಗರ ಗ್ರಾಮಲೆಕ್ಕಾಧಿಕಾರಗಳವರ ಮತ್ತು ಜನನ ಮತ್ತು ಮರಣ ನೋದಣಿ ಅಧಿಕಾರಿಗಳ ಕಚೇರಿ, ರಾಮನಗರ, ಜೋಯಿಡಾ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ಬೆಳಗಾವಿ, ಇವರು ಪೋಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕಾರವಾರ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಅಜ್ಜನಗೌಡ, ಬಿನ್. ವಡಕನಗೌಡ ಪಾಟೀಲ್, ಕಂದಾಯ ನಿರೀಕ್ಷಕರು, ಕ್ಯಾಸಲ್ ರಾಕ್ ಹೋಬಳಿ, ರಾಮನಗರ ಗ್ರಾಮಲೆಕ್ಕಾಧಿಕಾರಗಳವರ ಮತ್ತು ಜನನ ಮತ್ತು ಮರಣ ನೋದಣಿ ಅಧಿಕಾರಿಗಳ ಕಚೇರಿ, ರಾಮನಗರ, ಜೋಯಿಡಾ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ. ರವೀಂದ್ರ ನಾರಾಯಣ ರೇಡಕರ, ಮುಖ್ಯ ಸಂಚಾಲಕರು, ಕಾಳಿ ಬ್ರಿಗೇಡ್, ಜೋಯಿಡಾ, ಸಾಕಿನ್: ಸೋನಾರವಾರ್ಡ, ಜೋಯಿಡಾ ಗ್ರಾಮ, ಅಂಚೆ ಜೋಯಿಡಾ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ಶ್ರೀಮತಿ ಶೈಲಾ ಕೋಂ ಭೀಮಾ ಸೋಲೇಕರ, ರಾಮನಗರ ನಿವಾಸಿ, ಜೋಯಿಡಾ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ,(ನೊಂದ ಮಹಿಳೆ) ರವರಿಂದ ,ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಉತ್ತರಕನ್ನಡ ಜಿಲ್ಲೆ, ಕಾರವಾರ, ಎ.ಸಿ.ಬಿ ಪೋಲೀಸ್ ಠಾಣೆ ಮೊಕದ್ದಮೆ **ಸಂ: 04/2019** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರು ಕಾಳಿ ಬ್ರಿಗೇಡ್ ಸಂಘಟನೆ, ಜೋಯಿಡಾ ತಾಲ್ಲೂಕು, ಇದರಲ್ಲಿ ಮುಖ್ಯ ಸಂಚಾಲಕರಾಗಿದ್ದು, ಸಮಸ್ಯೆಗಳ ವಿರುದ್ಧ ಹೋರಾಟ, ಭ್ರಷ್ಟಾಚಾರ

ನಿರ್ಮೂಲನೆ, ಅನ್ಯಾಯಕ್ಕೆ ಒಳಗಾದ ಜನರ ರಕ್ಷಣೆ, ಇತ್ಯಾದಿ ವಿಷಯಗಳ ಕುರಿತು ಪಕ್ಷಾತೀತವಾಗಿ ಕೆಲಸ ಮಾಡುತ್ತಾ ಬಂದಿರುತ್ತಾರೆ. ಹೀಗಿರುವಾಗ ದಿನಾಂಕ: 27/05/2019ರಂದು ರಾಮನಗರದ ಶ್ರೀಮತಿ ಶೈಲಾ ಕೋಂ ಭೀಮಾ ಸೋಲೇಕರ, ರವರು ದೂರುದಾರರನ್ನು ಸಂಪರ್ಕಿಸಿ ತನ್ನ ಗಂಡನ ಪಿತ್ರಾರ್ಜಿತ ಜಮೀನಿನ ವಾಟ್ನಿ ಬಗ್ಗೆ ವಿವರಿಸಿ, ಮಾನ್ಯ ನ್ಯಾಯಾಲಯದ ಮೂಲಕ ರಾಮನಗರ (ಅಕ್ರಾಳಿ) ಗ್ರಾಮದ ಸ.ನಂ. 26/145ಬಿ+146+147, ಹಿಸ್ಸಾ ಪಿ.ನಂ.630, ಕ್ಷೇತ್ರ 04-38 ಗುಂಟೆ ಜಮೀನನ್ನು ರಾಜಿ ಮೂಲಕ ವಿಭಾಗ ಮಾಡಿಕೊಂಡಿದ್ದು, ಈ ಬಗ್ಗೆ ಹಕ್ಕು ಬದಲಾವಣೆ ಮಾಡಿಕೊಡಲು ಜೋಯಿಡಾ ತಹಶೀಲ್ದಾರ ಕಚೇರಿಗೆ ಹಳಿಯಾಳ ಉಪ–ನೋಂದಣಾಧಿಕಾರಿಗಳು 'ಜ' ಫಾರ್ಮ್ ಕಳುಹಿಸಿಕೊಟ್ಟಿದ್ದು, ಹಕ್ಕು ಬದಲಾವಣೆ ಮಾಡಿಕೊಡಲು ಎದುರುದಾರರನ್ನು ಭೇಟಿಯಾಗಿ ವಿಚಾರಿಸಿದಾಗ, ಮ್ಯುಟೇಶನ್ ಮಾಡಿಕೊಡಲು ರೂ.5,000/– ನೀಡಬೇಕೆಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಶ್ರೀಮತಿ ಶೈಲಾರವರ ಗಂಡ ಪಾರ್ಶ್ವವಾಯು ರೋಗಕ್ಕೆ ತುತ್ತಾಗಿದ್ದು, ಅವರ ಮಗ ಮೃತನಾಗಿದ್ದು, ಮಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ತಾನು ಕೂಲಿ ಕೆಲಸ ಮಾಡಿಕೊಂಡಿರುವುದರಿಂದ ತನಗೆ ಅಷ್ಟು ಕೊಡಲು ಆಗುವುದಿಲ್ಲಾ ಎಂದು ಶ್ರೀಮತಿ ಶೈಲಾ ಕೋಂ ಭೀಮಾ ಸೋಲೇಕರ, ರವರು ಮನವಿ ಮಾಡಿಕೊಂಡರೂ ಎದುರುದಾರರು ಕನಿಕರ ವ್ಯಕ್ತಪಡಿಸಿರುವುದಿಲ್ಲ. ಆದಕಾರಣ ಶ್ರೀಮತಿ ಶೈಲಾ ಕೋಂ ಭೀಮಾ ಸೋಲೇಕರ, ರವರು ಮನನೊಂದು ಅವರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ದೂರುದಾರರ ಹತ್ತಿರ ಬಂದಿರುತ್ತಾರೆ. ಆಗ ಸದರಿ ದೂರುದಾರರು ದಿನಾಂಕ:28/05/2019ರಂದು ಶ್ರೀಮತಿ ಶೈಲಾ ಕೋಂ ಭೀಮಾ ಸೋಲೇಕರ, ರವರ ಮನೆಗೆ ಹೋಗಿ, ಅವರಿಗೆ ತನ್ನ ಮೊಬೈಲ್ ಕೊಟ್ಟು ಎದುರುದಾರರನ್ನು ಭೇಟಿಯಾಗಿ ಅವರು ಮಾತನಾಡಿದ್ದನ್ನು ರೆಕಾರ್ಡ್ ಮಾಡಲು ತಿಳಿಸಿರುತ್ತಾರೆ. ಅದರಂತೆ ಶ್ರೀಮತಿ ಶೈಲಾ ಕೋಂ ಭೀಮಾ ಸೋಲೇಕರ, ರವರು ಎದುರುದಾರರನ್ನು ಭೇಟಿಯಾದಾಗ, ಎದುರುದಾರರು ರೂ.2,000/– ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದನ್ನು ರೆಕಾರ್ಡಿಂಗ್ ಮಾಡಿಕೊಂಡು, ದೂರುದಾರರಿಗೆ ಈ ಬಗ್ಗೆ ಎಸಿಬಿ ರವರಿಗೆ ದೂರು ನೀಡುವಂತೆ ಸಲಹೆ ನೀಡಿರುತ್ತಾರೆ. ಶ್ರೀಮತಿ ಶೈಲಾ ಕೋಂ ಭೀಮಾ ಸೋಲೇಕರ, ರವರು ಓರ್ವ ಮಹಿಳೆಯಾಗಿದ್ದು ಮತ್ತು ಅವಳ ಗಂಡ ಪಾರ್ಶ್ವವಾಯು ರೋಗಕ್ಕೆ ತುತ್ತಾಗಿದ್ದು, ತನಗೆ ಓಡಾಡಲು ಸಾಧ್ಯವಾಗುವುದಿಲ್ಲ, ಕಾರಣ ಅವರ ಪರವಾಗಿ ದೂರುದಾರರೇ ದೂರು ನೀಡುವಂತೆ ಸೂಚಿಸಿದ್ದು, ಅಲ್ಲದೇ ಮುಂದಿನ ತನಿಖೆಯಲ್ಲಿ ಅವರು ಪಾಲ್ಗೊಂಡು ಸಹಕರಿಸುವುದಾಗಿ ತಿಳಿಸಿದ್ದು, ಆ ಕಾರಣ ದಿನಾಂಕ: 28/05/2019 ರಂದು ಸಂಜೆ 04–15 ಗಂಟೆಗೆ ಶ್ರೀಮತಿ ಶೈಲಾ ಕೋಂ ಭೀಮಾ ಸೋಲೇಕರ, ರವರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ಹಾಗೂ ತನ್ನ ಪತಿಗೆ ಪಾರ್ಶ್ವವಾಯು ರೋಗವಿದ್ದುದರಿಂದ, ಅವರ ಪರಿಚಯಸ್ಥರಾದ ದೂರುದಾರರಿಗೆ ದೂರು ದಾಖಲು ಮಾಡುವಂತೆ ತಿಳಿಸಿದಾಗ, ಸದರಿ ದೂರುದಾರರು ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು,

ಅದರ ಆಧಾರದ ಮೇಲೆ ಕಾರವಾರ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 04/2019 ರಲ್ಲಿ ಕಲಂ 7 ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (ತಿದ್ದು ಪಡಿ)ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

ii. ಪ್ರಕರಣ ದಾಖಲಾದ ನಂತರ ತನಿಖಾಧಿಕಾರಿಗಳು ಅದೇ ದಿನ ಸಂಜೆ 6–35 ಗಂಟೆಗೆ ಸರ್ಕಾರಿ ಪಂಚರುಗಳಾದ 1) ಶ್ರೀ ಮ್ಯಾನ್ಯುವೆಲ್ ಮನೋಹರ, (ನೆರಳು ಸಾಕ್ಷಿ) 2) ಶ್ರೀ ರವಿಕಾಂತ ವಿಠಲ ನಾಯ್ಕ, ಇವರುಗಳನ್ನು ಬರಮಾಡಿಕೊಂಡು ಪ್ರಕರಣವೊಂದರ ತನಿಖೆಯಲ್ಲಿ ಪಂಚಸಾಕ್ಷಿಗಳಾಗಿ ಸಹಕರಿಸಲು ಮರುದಿನ ದಿನಾಂಕ:29/05/2019 ರಂದು ಬೆಳಿಗ್ಗೆ 6–15 ಗಂಟೆಗೆ ಹಾಜರಾಗುವಂತೆ ಸೂಚಿಸಿದ ಮೇರೆಗೆ ಪಂಚರುಗಳು ದಿನಾಂಕ;29/05/2019ರಂದು ಹಾಜರಾಗಿದ್ದು, ಅವರುಗಳಿಗೆ ಸಿಬ್ಬಂದಿಯವರ ಪರಿಚಯ ಮಾಡಿಕೊಟ್ಟು, ಪ್ರಕರಣದ ತನಿಖೆಯ ಸಲುವಾಗಿ ಜೋಯಿಡಾಗೆ ಹೋಗುವುದಿದೆ ಎಂದು ತಿಳಿಸಿ, ಸರ್ಕಾರಿ ವಾಹನಗಳಲ್ಲಿ ಬೆಳಿಗ್ಗೆ 8–45ಗಂಟೆಗೆ ಜೋಯಿಡಾ ಪಟ್ಟಣದ ಲೋಕೋಪಯೋಗಿ ಇಲಾಖೆಯ ವಿ.ಐ.ಪಿ. ಸರ್ಕ್ಯುಟ್ ಹೌಸ್‌ಗೆ ಬಂದಿರುತ್ತಾರೆ. ಅಲ್ಲಿಗೆ ದೂರುದಾರರಾದ ಶ್ರೀ. ರವೀಂದ್ರ ನಾರಾಯಣ ರೇಡಕರ, ಮುಖ್ಯ ಸಂಚಾಲಕರು, ಕಾಳಿ ಬ್ರಿಗೇಡ್, ಜೋಯಿಡಾ, ಹಾಗೂ ನೊಂದ ಮಹಿಳೆ ಶ್ರೀಮತಿ. ಶೈಲಾ ಕೋಂ ಭೀಮಾ ಸೋಲೇಕರ, ಜೋಯಿಡಾ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ, ಇವರುಗಳು ಬಂದಿದ್ದು, ಅವರುಗಳ ಪರಿಚಯವನ್ನು ಮಾಡಿಕೊಂಡು ಹಾಗೂ ಪಂಚರಿಗೆ ಪರಿಚಯ ಮಾಡಿಸಿ ದೂರಿನ ಪ್ರತಿಯನ್ನು ಪಂಚರುಗಳಿಗೆ ಕೊಟ್ಟು, ಅದರಲ್ಲಿಯ ವಿಷಯವನ್ನು ತಿಳಿದುಕೊಳ್ಳಲು ಹೇಳಿದಂತೆ, ಪಂಚರುಗಳು ದೂರಿನಲ್ಲಿಯ ವಿಷಯವನ್ನು ಓದಿ ತಿಳಿದುಕೊಂಡಿರುತ್ತಾರೆ. ನಂತರ ದೂರುದಾರರನ್ನು ಮತ್ತು ನೊಂದ ವ್ಯಕ್ತಿ ಶ್ರೀಮತಿ. ಶೈಲಾ ರವರನ್ನು ಕೇಳಲಾಗಿ, ಅವರು ದೂರಿನಲ್ಲಿ ನೀಡಿರುವ ಎಲ್ಲಾ ಅಂಶಗಳು ನಿಜವಿರುತ್ತದೆ ಎಂದು ತಿಳಿಸಿದ್ದು, ಅದನ್ನು ಪಂಚರು ಖಾತ್ರಿಮಾಡಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪಂಚರ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರುಪಡಿಸಿದ್ದು, ಮೊಬೈಲ್‌ನಲ್ಲಿದ್ದ ರೆಕಾರ್ಡ್‌ನ್ನು ಲ್ಯಾಪ್ ಟಾಪ್ ಮೂಲಕ ಕನೆಕ್ಟ್ ಮಾಡಿ ಅದರಲ್ಲಿದ್ದ ಸಂಭಾಷಣೆ ಕೊಂಕಣಿ ಭಾಷೆಯಲ್ಲಿದ್ದು, ಅದನ್ನು ತನಿಖಾಧಿಕಾರಿಗಳು ಅವರ ಸಿಬ್ಬಂದಿಯಿಂದ ಕನ್ನಡ ಭಾಷೆಗೆ ತರ್ಜುಮೆ ಮಾಡಿಸಿ ಬೆರಳಚ್ಚು ಮಾಡಿಸಿರುತ್ತಾರೆ. ನಂತರ ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ನಂತರ ಲ್ಯಾಪ್‌ಟಾಪ್ ಮೂಲಕ ಸದರಿ ಸಂಭಾಷಣೆಯನ್ನು ಡಿವಿಡಿಗಳಿಗೆ ಡೌನ್ ಲೋಡ್ ಮಾಡಿಸಿ, ಸಿಡಿಗಳಿಗೆ ವರ್ಗಾಯಿಸಿರುತ್ತಾರೆ ಹಾಗೂ ಸದರಿ ಡಿವಿಡಿ ಹಾಗೂ ಸಿಡಿಗಳನ್ನು ಅಮಾನತ್ತು ಪಡಿಸಿಕೊಂಡು ಕವರ್‌ನಲ್ಲಿ ಹಾಕಿ ಸೀಲ್ ಮಾಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರೊಂದಿಗೆ ಬಂದಿದ್ದ ನೊಂದ ವ್ಯಕ್ತಿ ಶ್ರೀಮತಿ. ಶೈಲಾರವರನ್ನು ಲಂಚದ ಹಣದ ಬಗ್ಗೆ ಕೇಳಲಾಗಿ, ಅವರು ಲಂಚ ನೀಡಲು ತಂದ (ರೂ.500/– ಮುಖಬೆಲೆಯ 4–ನೋಟುಗಳು) ಒಟ್ಟು 2,000/– ರೂ.ಗಳನ್ನು

ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಸದರಿ ನೋಟಿನ ನಂ.ಗಳನ್ನು ಮತ್ತು ಮೌಲ್ಯವನ್ನು ಪಂಚ–2ರವರು ಪರಿಶೀಲಿಸಿ, ಪಂಚ–1ರವರು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ನಂತರ ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚ ಸಾಕ್ಷಿ–2 ರವಿಕಾಂತ ವಿಠಲ ನಾಯ್ಕ ರವರು ಫಿನಾಫ್ತಲೀನ್ ಪೌಡರನ್ನು ಸವರಿದ ಹಣವನ್ನು ತಮ್ಮ ಬಲಗೈನಲ್ಲಿ ತೆಗೆದುಕೊಂಡು ಎರಡು ಕೈಗಳಿಂದ ಎಣಿಸಿ, ಸದರಿ ಹಣವನ್ನು ನೊಂದ ಮಹಿಳೆ ಶ್ರೀಮತಿ. ಶೈಲಾ ರವರು ತಮ್ಮೊಂದಿಗೆ ತಂದಿದ್ದ KURTIS Just Feminine ಎಂದು ಪ್ರಿಂಟ್ ಆಗಿದ್ದ ತಿಳಿ ನೇರಳೆ ಬಣ್ಣದ ಬಟ್ಟೆಯ ಕ್ಯಾರಿ ಬ್ಯಾಗ್ನಲ್ಲಿ ಇಟ್ಟಿರುತ್ತಾರೆ. ನಂತರ ಪಂಚ ಸಾಕ್ಷಿ–2ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ನೊಂದ ಮಹಿಳೆ ಶ್ರೀಮತಿ. ಶೈಲಾರವರಿಗೆ ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಪಂಚ–1– ಮ್ಯಾನ್ಯುವೆಲ್ ಮನೋಹರ, ರವರಿಗೆ ನೊಂದ ಮಹಿಳೆ ಶ್ರೀಮತಿ. ಶೈಲಾ ರವರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ನೊಂದ ವ್ಯಕ್ತಿ ಶ್ರೀಮತಿ. ಶೈಲಾರವರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ತನ್ನ ಬಳಿ ಇರುವ ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ವಾಯ್ಸ್ ರೆಕಾರ್ಡನಲ್ಲಿ ರೆಕಾರ್ಡ್ ಮಾಡಲು ನೊಂದ ಮಹಿಳೆ ಶ್ರೀಮತಿ. ಶೈಲಾರವರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ನೀಡಿರುತ್ತಾರೆ. ತನಿಖಾಧಿಕಾರಿಗಳು ಎಲ್ಲಾ ಸಿಬ್ಬಂದಿ, ದೂರುದಾರರಿಗೆ, ನೊಂದ ವ್ಯಕ್ತಿ ಶ್ರೀಮತಿ. ಶೈಲಾ ರವರಿಗೆ ಹಾಗೂ ಪಂಚರಿಗೆ ಸೋಪಿನಿಂದ ಕೈತೊಳೆಯಲು ಸೂಚಿಸಿದ್ದು, ಅದರಂತೆ ಅವರೆಲ್ಲರೂ ಸೋಪಿನಿಂದ ಕೈತೊಳೆದಿರುತ್ತಾರೆ. ತನಿಖಾಧಿಕಾರಿಗಳು ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿ, ದಿನಾಂಕ: 29/05/2019ರಂದು ಬೆಳಿಗ್ಗೆ 09–15 ರಿಂದ 10–30 ಗಂಟೆಯವರಿಗೆ ಜೋಯಿಡಾ ಪಟ್ಟಣದ ಲೋಕೋಪಯೋಗಿ ಇಲಾಖೆಯ ನೂತನ ವಿ.ಐ.ಪಿ. ಸರ್ಕ್ಯೂಟ್ ಹೌಸ್‌ನ ನೆಲ ಮಾಳಿಗೆಯ ಡೈನಿಂಗ್ ಹಾಲ್‌ನಲ್ಲಿ ಲ್ಯಾಪ್ ಟಾಪ್ ಮೂಲಕ ಪ್ರಾಯೋಗಿಕ ಪಂಚನಾಮೆಯನ್ನು ಗಣಕೀಕರಣ ಮಾಡಿಸಿರುತ್ತಾರೆ.

iii. ಅದೇ ದಿನ ಅಂದರೆ ದಿನಾಂಕ: 29/05/2019ರಂದು ಬೆಳಿಗ್ಗೆ 10–45ಕ್ಕೆ ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ, ತನಿಖಾಧಿಕಾರಿಗಳು ದೂರುದಾರನ್ನು ಮತ್ತು ನೆರಳು ಸಾಕ್ಷಿಯನ್ನು ಜೊತೆ ಮಾಡಿಕೊಂಡು ಇಲಾಖಾ ವಾಹನಗಳಲ್ಲಿ ಜೋಯಿಡಾ ಪಟ್ಟಣದ

ಲೋಕೋಪಯೋಗಿ ಇಲಾಖೆಯ ನೂತನ ವಿ.ಐ.ಪಿ. ಸರ್ಕ್ಯೂಟ್ ಹೌಸ್‌ನಿಂದ ಹೊರಟು ಸುಮಾರು 12–00 ಗಂಟೆಗೆ ರಾಮನಗರ ತಲುಪಿ, ರಾಮನಗರ ಸರ್ಕಲ್‌ನಲ್ಲಿ ವಾಹನದಿಂದ ನೊಂದ ಮಹಿಳೆ ಶ್ರೀಮತಿ. ಶೈಲಾ ಹಾಗೂ ಪಂಚ–1– ನೆರಳು ಸಾಕ್ಷಿಯನ್ನು ಇಳಿಸಿ, ಅವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ, ಎದುರುದಾರರನ್ನು ಭೇಟಿ ಮಾಡಿ ಮಾತನಾಡಿದ್ದನ್ನು ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಲು ತಿಳಿಸಿ, ಸದರಿ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿಕೊಂಡು, ಎದುರುದಾರರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿರುತ್ತಾರೆ. ಆಗ ಸಮಯ 12–15 ಗಂಟೆಯಾಗಿರುತ್ತದೆ. ನಂತರ ನೊಂದ ಮಹಿಳೆ ಶ್ರೀಮತಿ. ಶೈಲಾ ಹಾಗೂ ನೆರಳು ಸಾಕ್ಷಿಯವರು ಎದುರುದಾರರು ಬರಲು ಹೇಳಿದ ರಾಮನಗರದ ಗ್ರಾಮ ಲೆಕ್ಕಾಧಿಕಾರಿ ಕಾರ್ಯಾಲಯದ ಒಳಗಡೆ ಹೋದಾಗ, ಅಲ್ಲಿ ಎದುರುದಾರರು ಇಲ್ಲದೇ ಇದ್ದು, ಅಲ್ಲಿಯೇ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದ ಓರ್ವ ಮಹಿಳೆಯನ್ನು ವಿಚಾರಿಸಲಾಗಿ, ಅವರು ಎದುರುದಾರರು ಕರ್ತವ್ಯದ ಮೇಲೆ ಹೊರಗೆ ಹೋಗಿದ್ದು ಒಂದು ಗಂಟೆಯ ಬಳಿಕ ಬರುತ್ತಾರೆ ಎಂದು ತಿಳಿಸಿದ್ದು, ಅದರಂತೆ ನೊಂದ ಮಹಿಳೆ ಶ್ರೀಮತಿ. ಶೈಲಾ ಹಾಗೂ ನೆರಳು ಸಾಕ್ಷಿಯವರು ಎದುರುದಾರರು ರಾಮನಗರದ ಗ್ರಾಮ ಲೆಕ್ಕಾಧಿಕಾರಿ ಕಾರ್ಯಾಲಯದ ಜಗುಲಿಯ ಮೇಲೆ ಎದುರುದಾರರಿಗೆ ಕಾದು ಕುಳಿತಿದ್ದು, ಸುಮಾರು 1–15 ಗಂಟೆಗೆ ಎದುರುದಾರರು ಕಚೇರಿಗೆ ಬಂದಿರುತ್ತಾರೆ. ಆಗ ನೊಂದ ಮಹಿಳೆ ಶ್ರೀಮತಿ. ಶೈಲಾ, ರವರು ಕಾರ್ಯಾಲಯದ ಒಳಗಡೆ ಹೋಗಿ ಎದುರುದಾರರನ್ನು ಭೇಟಿ ಮಾಡಿ ಮಾತನಾಡಿ, ಬಳಿಕ ತಮ್ಮೊಂದಿಗೆ ತಂದಿರುವ **KURTIS Just Feminine** ಎಂದು ಪ್ರಿಂಟ್ ಆಗಿದ್ದ ತಿಳಿ ನೇರಳೆ ಬಣ್ಣದ ಬಟ್ಟೆಯ ಕ್ಯಾರಿ ಬ್ಯಾಗ್‌ನಲ್ಲಿ ಇಟ್ಟಿದ್ದ ಫಿನಾಫ್ತಲೀನ್ ಪೌಡರ್ ಲೇಪಿತ ಲಂಚದ ಹಣವನ್ನು ನೀಡಿದ್ದು, ಎದುರುದಾರರು ಸದರಿ ಲಂಚದ ಹಣವನ್ನು ತನ್ನ ಎರಡೂ ಕೈಗಳಿಂದ ಎಣಿಸಿ ತನ್ನ ಪ್ಯಾಂಟಿನಿಂದ ಹಿಂಬದಿಯ ಎಡ ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ನಂತರ ನೊಂದ ಮಹಿಳೆ ಶ್ರೀಮತಿ. ಶೈಲಾರವರು ಟ್ರಾಪ್ ಸಿಬ್ಬಂದಿಗೆ ಕಾಣುವಂತೆ ತಮ್ಮ ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಿರುತ್ತಾರೆ.

iv. ಆ ಸಂದರ್ಭದಲ್ಲಿ ನೊಂದ ಮಹಿಳೆ ಶ್ರೀಮತಿ. ಶೈಲಾರವರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ಸದರಿ ಎದುರುದಾರರಿದ್ದ ಸ್ಥಳಕ್ಕೆ ಬಂದು ತಮ್ಮ ಗುರುತಿನ ಚೀಟಿ ತೋರಿಸಿ, ತಮ್ಮ ಪರಿಚಯ ಹೇಳಿ ಮತ್ತು ನಿಮ್ಮ ಪರಿಚಯ ಕೇಳಿ, ನಿಮ್ಮ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ತನಿಖಾಧಿಕಾರಿಗಳು ಘಟನೆಯ ಕಾಲಕ್ಕೆ ನಡೆದ ವಿದ್ಯಾಮಾನಗಳ ಬಗ್ಗೆ ನೊಂದ ಮಹಿಳೆ ಶ್ರೀಮತಿ. ಶೈಲಾರವರನ್ನು ವಿಚಾರಿಸಿದಾಗ ಅವರು ಸದರಿ ಘಟನೆಯ ವಿದ್ಯಾಮಾಗಳ ಬಗ್ಗೆ ಹೇಳಿದ್ದು, ನೆರಳು ಸಾಕ್ಷಿರವರನ್ನು ವಿಚಾರಿಸಿದಾಗ, ನೆರಳು ಸಾಕ್ಷಿರವರು ಸಹ ದೂರುದಾರರ ಹೇಳಿಕೆಗೆ ಅನುಸರಿಸಿ ನುಡಿದಿರುತ್ತಾರೆ.

ನಂತರ ತನಿಖಾಧಿಕಾರಿಗಳು ಎದುರುದಾರರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ಲಂಚದ ಹಣವನ್ನು ಎಲ್ಲಿ ಇಟ್ಟಿರುತ್ತೀರಿ, ಹಾಜರುಪಡಿಸಿ ಎಂದು ಸೂಚಿಸಿದಾಗ, ಅವರು ತಾನು ಧರಿಸಿದ್ದ ಪ್ಯಾಂಟಿನ ಹಿಂಬದಿಯ ಎಡಜೇಬಿನಿಂದ ಹಣವನ್ನು ತೆಗೆದು ತನಿಖಾಧಿಕಾರಿಗಳ ಸೂಚನೆಯಂತೆ ಪಂಚ–2ರವರಿಗೆ ನೀಡಿದ್ದು, ಪಂಚ–2ರವರು ಸದರಿ ಹಣವನ್ನು ಪರಿಶೀಲಿಸಿದಾಗ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಸದರಿ ಲಂಚದ ಹಣದ ಬಗ್ಗೆ ಎದುರುದಾರರಲ್ಲಿ ವಿಚಾರಿಸಿದಾಗ, ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

v. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ಮ್ಯೂಟೇಶನ್ ಎಂಟ್ರಿಗೆ ಸಂಬಂಧಿಸಿದಂತೆ ನಾನು ದಿ:27/05/2019ರಂದೇ ಖಾತಾ ರಿಜಿಸ್ಟರ್ ಮಾಡಿ ಕೊಡಲಾಗಿದೆ. ಅಲ್ಲದೇ ಸದರಿ ಕೇಸ್ ನನಗೆ ದಿ:27/05/2019ರಂದು ತಾಲ್ಲೂಕ ಕಚೇರಿಯಿಂದ ನೀಡಿದ್ದು, ಅದೇ ದಿವಸ ನಾನು ನಿಖಾಲೆಗೊಳಿಸಿದ್ದೇನೆ. ಈ ವಿಷಯ ಕುರಿಡು ನಾನು ಹಣಕ್ಕೆ ಒತ್ತಾಯಿಸಿರುವುದಿಲ್ಲ ಮತ್ತು ಪ್ರಕರಣಕ್ಕೆ ಸಂಬಂಧಿಸಿದ ವ್ಯಕ್ತಿ ಸಕಾಲಕ್ಕೆ ನಮ್ಮ ಕೆಲಸ ಮಾಡಿಕೊಟ್ಟಿದ್ದೀರಿ, ಕಾರಣ ನಿಮಗೆ ನಾನು ಖುಷಿಯಾಗಿ ರೂ. 2,000/– ನೀಡಲು ಬಂದರು, ಆದರೆ ಆ ಕಾಲಕ್ಕೆ ನಾನು ನಿರಾಕರಿಸಿದೆನು. ಒತ್ತಾಯ ಪೂರ್ವಕವಾಗಿ ನನ್ನ ಟೇಬಲ್ ಮೇಲೆ ಸದರಿ ಹಣ ಇಟ್ಟುಹೋದರು ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ತರಹದ ಆಮಿಷ ಒಡ್ಡಿರುವುದಿಲ್ಲ ಅಂತ ಈ ಮೂಲಕ ನನ್ನ ಹೇಳಿಕೆ ಇರುತ್ತದೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ದಸ್ತಗಿರಿ ಮಾಡಿ, ಸದರಿ ವಿಷಯವನ್ನು ಅವರ ಮೇಲಾಧಿಕಾರಿಯಾದ ತಹಶೀಲ್ದಾರ ಸಂಜಯ ಕಾಂಬಳೆರವರಿಗೆ ಮತ್ತು ದೂರುದಾರರ ಪತ್ನಿ ಸುನಿತಾ ಪಾಟೀಲ್‌ರವರಿಗೆ ದೂರವಾಣಿ ಮುಖಾಂತರ ತಿಳಿಸಿ, ತಹಶೀಲ್ದಾರ ಸಂಜಯ ಕಾಂಬಳೆರವರಿಗೆ ಎದುರುದಾರರ ಮೇಲಾಧಿಕಾರಿಯವರನ್ನು ತಕ್ಷಣ ರಾಮನಗರದ ಗ್ರಾಮಲೆಕ್ಕಾಧಿಕಾರಿಗಳ ಕಚೇರಿಗೆ ಕಳುಹಿಸಿಕೊಡಲು ತಿಳಿಸಿರುತ್ತಾರೆ. ನೊಂದ ಮಹಿಳೆ ವಾಯ್ಸ್ ರೆಕಾರ್ಡ್‌ನ್ನು ಹಾಜರುಪಡಿಸಿದ್ದು, ಅದನ್ನು ಲ್ಯಾಪ್ ಟಾಪ್ಗೆ ಅಳವಡಿಸಿ ಅದರಲ್ಲಿದ್ದ ಸಂಭಾಷಣೆಯನ್ನು ಡೌನ್ ಲೋಡ್ ಮಾಡಿ, ಪಂಚರಿಗೆ ಕೇಳಿಸಿ, ಅದನ್ನು ಲಿಪಿಕರಣ ಮಾಡಿ ಡಿವಿಡಿಗಳಿಗೆ ವರ್ಗಾಯಿಸಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿಸಿ, ಅವರು ಧರಿಸಿದ್ದ ಪ್ಯಾಂಟಿನ ಹಿಂಬದಿಯ

ಎಡಜೇಬನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಸದರಿ ಪ್ಯಾಂಟ್‌ನ್ನು ತನಿಖಾಧಿಕಾರಿಗಳು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈ ವೇಳೆಗೆ ಎದುರುದಾರರ ಮೇಲಾಧಿಕಾರಿಯಾದ ಜೋಯಿಡಾ ತಾಲ್ಲೂಕು ಕಚೇರಿಯ ಶಿರಸ್ತೆದಾರರಾದ ಶ್ರೀ ಶೌಕತ್ ಆಲಿರವರು ಹಾಜರಾಗಿದ್ದು, ಅವರಿಗೆ ತನಿಖಾಧಿಕಾರಿಗಳು ಎದುರುದಾರರು ಲಂಚ ಪ್ರಕರಣದಲ್ಲಿ ದಸ್ತಗಿರಿಯಾದ ವಿಷಯ ತಿಳಿಸಿ, ನೊಂದ ಮಹಿಳೆಗೆ ಸಂಬಂದಪಟ್ಟ ಕಡತವನ್ನು ಮತ್ತು ಕಚೇರಿಯ ಹಾಜರಾತಿ ಪುಸ್ತಕವನ್ನು ಹಾಜರುಪಡಿಸಲು ತಿಳಿಸಿದ್ದು, ಅದರಂತೆ ಕಡತವನ್ನು ರಾಮನಗರದ ಗ್ರಾಮ ಲೆಕ್ಕಾಧಿಕಾರಿಯಾದ ಸಂತೋಷ್ ನಾಯ್ಕರವರ ಮೂಲಕ ಹಾಜರುಪಡಿಸಿದ್ದು, ಅವುಗಳ ಜೆರಾಕ್ಸ್ ನಕಲನ್ನು ಮಾಡಿಸಿ, ಶ್ರೀ ಶೌಕತ್ ಆಲಿರವರ ಮೂಲಕ ಧೃಡೀಕರಿಸಿಕೊಂಡು ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಮೇಲಾಧಿಕಾರಿಯಾದ ಶ್ರೀ ಶೌಕತ್ ಆಲಿರವರಿಗೆ ಮತ್ತು ರಾಮನಗರದ ಗ್ರಾಮ ಲೆಕ್ಕಾಧಿಕಾರಿಯಾದ ಸಂತೋಷ್ ನಾಯ್ಕರವರಿಗೆ, ಎದುರುದಾರರು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಾಗ ನೊಂದ ಮಹಿಳೆ ರೆಕಾರ್ಡ್ ಮಾಡಿಕೊಂಡಿದ್ದ ಸಂಭಾಷಣೆ (ಟ್ರ್ಯಾಪ್ ಪೂರ್ವ) ಮತ್ತು ಟ್ರ್ಯಾಪ್ ಸಮಯದಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಕೇಳಿಸಿದ್ದು, ಅವರುಗಳು ಅದರಲ್ಲಿದ್ದ ಒಂದು ಧ್ವನಿಯನ್ನು ಎದುರುದಾರರ ಧ್ವನಿಯೆಂದು ಗುರುತಿಸಿರುತ್ತಾರೆ ಹಾಗೂ ಈ ಬಗ್ಗೆ ಹೇಳಿಕೆ ಬರೆದುಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಟ್ರ್ಯಾಪ್ ಪೂರ್ವ ಮತ್ತು ಟ್ರ್ಯಾಪ್ ಸಮಯದಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಲಿಪೀಕರಣ ಮಾಡಿ, ನೊಂದ ಮಹಿಳೆ ಹಾಗೂ ಎದುರುದಾರರಿಂದ ಮೂರು ಮೂರು ಬಾರಿ ಓದಿಸಿ, ಅವರುಗಳ ಮಾದರಿ ಧ್ವನಿಯನ್ನು ಪಡೆದು, ಡಿವಿಡಿಗೆ ವರ್ಗಾಯಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಈ ಎಲ್ಲಾ ಪ್ರಕ್ರಿಯೆಗಳನ್ನು ದಿನಾಂಕ: 29/05/2019ರಂದು ರಾಮನಗರದ ಗ್ರಾಮ ಲೆಕ್ಕಾಧಿಕಾರಿ, ಜನನ ಮತ್ತು ಮರಣ ನೊಂದಣಿ ಕಾರ್ಯಾಲಯದ ಉಪ-ತಹಶೀಲ್ದಾರ್‌ರವರ ಕೊಠಡಿಯಲ್ಲಿ ಮಧ್ಯಾಹ್ನ 01-30 ಗಂಟೆಯಿಂದ ಸಂಜೆ 06-00 ಗಂಟೆಯವರೆಗೆ ಲ್ಯಾಪ್ ಟಾಪ್‌ನಲ್ಲಿ ಟ್ರ್ಯಾಪ್ ಮಹಜರ್‌ನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಲಂಚದ ಹಣವನ್ನು ಜಪ್ತ ಮಾಡಿಕೊಂಡು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರರನ್ನು ಲಂಚದ ಹಣ ಸ್ವೀಕರಿಸಿದ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ.

vii. ಎದುರುದಾರರ ಎರಡೂ ಕೈಬೆರಳುಗಳನ್ನು ತೊಳೆಯಿಸಿದ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಹಾಗೂ ಎದುರುದಾರರ ಪ್ಯಾಂಟಿನ ಹಿಂಬದಿಯ ಎಡಜೇಬಿನಲ್ಲಿ ಫಿನಾಪ್ತೀಲೀನ್ ಅಂಶವು ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ಧೃಢಪಟ್ಟಿರುತ್ತದೆ. ತನಿಖಾಧಿಕಾರಿಗಳು ಪ್ರಕರಣಕ್ಕೆ

ಸಂಬಂದಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಎದುರುದಾರರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

viii. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ವರದಿ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ix. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಠಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 18/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ಜೊಯಿಡಾ ತಾಲ್ಲೂಕು, ರಾಮನಗರ (ಅಕ್ರಾಳಿ) ಗ್ರಾಮದ ಸ.ನಂ.26/145ಬಿ+146+147/ ಪ್ಲಾಟ್ ನಂ. 630 ಕ್ಷೇತ್ರ 04-30-00 ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ವಾಟ್ನಿ ಕುರಿತು ಎಮ್.ಆರ್.ನಂ.ಹೆಚ್-30/2018-19ರಂತೆ ದಿನಾಂಕ:19/04/2019ರಂದು ಭೂಮಿ ಗಣಕೀಕರಣದಲ್ಲಿ ಆಟೋ ಜನರೇಟರ್ ಆಗಿರುತ್ತದೆ. ಸದರೀ ಪ್ರಕರಣವು ಭೂಮಿಯಲ್ಲಿ ದಾಖಲಾಗಿ ಒಂದು ತಿಂಗಳು ಕಳೆದರೂ ಕಂದಾಯ ನಿರೀಕ್ಷಕರ ಕಚೇರಿಗಾಗಲೀ ಅಥವಾ ಗ್ರಾಮಲೆಕ್ಕಾಧಿಕಾರಿಗಳ ಕಚೇರಿಗಾಗಲೀ ಕಡತ ಬಂದಿರುವುದಿಲ್ಲ. ಈ ಕುರಿತು ಕಂದಾಯ ನಿರೀಕ್ಷಕರ ಭೂಮಿ ಲಾಗಿನ್‌ನಲ್ಲಿ ಸದರಿ ಪ್ರಕರಣ ಬಾಕಿ ಇರುವುದು ತಿಳಿದು ಬಂದಿರುತ್ತದೆ. ಈ ಬಗ್ಗೆ ದಿನಾಂಕ:27/05/2019ರಂದು ತಾಲ್ಲೂಕು ಭೂಮಿ ವಿಷಯ ನಿರ್ವಾಹಕರನ್ನು ಫೋನ್ ಮೂಲಕ ಸಂಪರ್ಕಿಸಲಾಗಿ, ನಜರ್ ಚುಕಿನಿಂದ ಪ್ರಕರಣ ತಾಲ್ಲೂಕಾ ಭೂಮಿ ವಿಷಯ ನಿರ್ವಾಹಕರಲ್ಲೇ ಇರುವುದಾಗಿ ತಿಳಿಸಿದ್ದರು. ನಂತರ ನಾನು ಸದರೀ

ಕಡತವನ್ನು ಅದೇ ದಿನದಂದು ರಾಮನಗರ ನಾಡ ಕಚೇರಿ ಇ–ಮೇಲ್ file:iiic:/Users/Administor/Desktop/Bhoomi6.OReport/temp/PrinteReport.html Date:27/05/2019 ರಂದು ಸುಮಾರು 11.30 ಗಂಟೆಗೆ ಮೇಲ್ ಮುಖಾಂತರ ತರಿಸಿಕೊಂಡು, ಕಂದಾಯ ನಿರೀಕ್ಷಕರ ಆವಕ–ಜಾವಕ ರಿಜಿಸ್ಟರ್‌ದಲ್ಲಿ ದಾಖಲಿಸಿ, ಸಹಿ ಕುರಿತು ಗ್ರಾಮಲೆಕ್ಕಾಧಿಕಾರಿ, ರಾಮನಗರ, ಇವರಿಗೆ ನೀಡಿದ್ದು ಇರುತ್ತದೆ. ನಂತರ ಗ್ರಾಮಲೆಕ್ಕಾಧಿಕಾರಿಗಳು ಅಂದೇ ಮಧ್ಯಾಹ್ನ ಸುಮಾರು 1–00 ಗಂಟೆಗೆ ತಮ್ಮ ಷರಾ ನೀಡಿ ನನಗೆ ಮುಂದಿನ ಕ್ರಮ ಕುರಿತು ಕಡತ ಸಲ್ಲಿಸಿದ್ದು, ಅದರಂತೆ ನಾನು ಅದೇ ದಿನಾಂಕ:27/05/2019 ರಂದು 3–00 ಗಂಟೆಗೆ (ರಾಮನಗರದಿಂದ ಸುಮಾರು 45ಕಿ.ಮೀ.) ಜೊಯಿಡಾ ತಾಲ್ಲೂಕು ಕಚೇರಿ ಭೂಮಿ ಕೇಂದ್ರಕ್ಕೆ ಹೋಗಿ ಸದರಿ ಪ್ರಕರಣವನ್ನು ನಿಖಾಲೆಗೊಳಿಸಿ ಅಲ್ಲಿಂದ ಪುನ: ರಾಮನಗರಕ್ಕೆ ಬಂದು ನಿಖಾಲೆಗೊಳಿಸಿದ ಪ್ರಕರಣವನ್ನು ತಾಲ್ಲೂಕಾ ಅಭಿಲೇಖಾಲಯಕ್ಕೆ ಸಲ್ಲಿಸುವ ಕುರಿತು ಗ್ರಾಮಲೆಕ್ಕಾಧಿಕಾರಿ, ರಾಮನಗರ, ಇವರಿಗೆ ವಹಿಸಿಕೊಟ್ಟಿರುತ್ತೇನೆ. ಹೀಗಿರುವಾಗ, ಎದುರುದಾರರು ನನ್ನ ಮೇಲೆ ದಿನಾಂಕ:28/05/2019ರಂದು ಮಾಡಿರುವ ಆರೋಪ ಸುಳ್ಳು ಹಾಗೂ ದುರುದ್ಧೇಶದಿಂದ ಮಾಡಿದ ಆರೋಪವಾಗಿರುತ್ತದೆ. ಅಲ್ಲದೇ ಪ್ರಸ್ತುತ ವಾಟ್ನಿ ದಾಖಲೆ ಪ್ರಕರಣ ನನ್ನ ಹತ್ತಿರ ಬಂದ ದಿನದಂದೇ ನಿಖಾಲೆಗೊಳಿಸಿರುತ್ತೇನೆ. (ಈ ಬಗ್ಗೆ ಅಗತ್ಯ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿರುತ್ತೇನೆ). ಸದರಿ ಪ್ರಕರಣ ಕುರಿತು ನಾನು ಅರ್ಜಿದಾರರಿಗೆ ಯಾವುದೇ ರೀತಿಯಿಂದಲೂ ಹಣದ ಬೇಡಿಕೆ ಒಡ್ಡಿರುವುದಿಲ್ಲ, ಅಲ್ಲದೇ ಪ್ರಕಣ ಇತ್ಯರ್ಥ ಪಡಿಸಲು ಸಹಾ ವಿಳಂಬ ಮಾಡದೇ ಸರ್ಕಾರಿ ಕೆಲಸವನ್ನು ನಿಷ್ಠೆಯಿಂದ ಮಾಡಿರುತ್ತೇನೆ. ಸದರೀ ಪ್ರಕರಣದಲ್ಲಿ ನನ್ನ ಮೇಲೆ ದೂರುದಾರರು ಸುಳ್ಳು ಹಾಗೂ ದುರುದ್ದೇಶತನದಿಂದ ಮಾಡಿದ ಆರೋಪವಾಗಿರುತ್ತದೆ. ಕಾರಣ, ಈ ವಿಷಯದಲ್ಲಿ ನಾನು ಯಾವುದೇ ರೀತಿ ಸರ್ಕಾರಿ/ಸಾರ್ವಜನಿಕ ನೌಕರರ ದುರ್ನಡತೆ ತೋರಿರುವುದಿಲ್ಲ, ಆದ್ದರಿಂದ ಈ ಹಂತದಲ್ಲಿಯೇ ನನ್ನನ್ನು ಸದರೀ ಪ್ರಕರಣದ ವಿಚಾರಣೆಯಿಂದ ಕೈಬಿಡಬೇಕೆಂದು ಮಾನ್ಯರಲ್ಲಿ ಗೌರವ ಪೂರ್ವಕವಾಗಿ ಬೇಡಿಕೊಳ್ಳತ್ತೇನೆ" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

21/1/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.